ಸಜ್ಜುಗೊಳಿಸಲು ನೆರವಾಗದ ಶಿಕ್ಷಣ, ಸನ್ನಡತೆಯ ಬಲವನ್ನು, ಪರೋಪಕಾರದ ಭಾವನೆಯನ್ನು ಮತ್ತು ಸಿಂಹದ ಸಾಹಸವನ್ನು ಅಭಿವ್ಯಕ್ತಿಗೊಳಿಸದ ಶಿಕ್ಷಣ ಆ ಹೆಸರಿಗೆ ಯೋಗ್ಯವೇ? ತನ್ನ ಕಾಲುಗಳ ಮೇಲೆ ತಾನು ನಿಲ್ಲುವುದನ್ನು ಸಾಧ್ಯಗೊಳಿಸುವ ಶಿಕ್ಷಣವೇ ನಿಜವಾದ ಶಿಕ್ಷಣ."

ರಾಮಕೃಷ್ಣ ಮಠ ಕೈಗೊಂಡಿರುವ **'ಮೌಲ್ಯ ಶಿಕ್ಷಣ ಯೋಜನೆ'** ಗೆ ೧೦೦ ಕೋಟಿ ರೂಪಾಯಿಗಳ ಅನುದಾನ ನೀಡಲು ನಮ್ಮ ಸರ್ಕಾರ ತತ್ತ್ವಶಃ ಅನುಮೋದನೆ ನೀಡಿದೆ (*ಅದು ಈಗ ಅನುಷ್ಠಾನಕ್ಕೆ ಬಂದು ಯಶಸ್ವಿಯಾಗಿ ಕಾರ್ಯಗತವಾಗುತ್ತಿದೆ – ಸಂ.*). ಈ ಯೋಜನೆ ನಮ್ಮ ಮಕ್ಕಳಲ್ಲಿ ಒಂದು ನೈತಿಕ ಶಿಸ್ತು ಮತ್ತು ಮೌಲ್ಯವ್ಯವಸ್ಥೆಯನ್ನು ಬೆಳಸಿ, ನಮ್ಮ ಸಮಾಜದಲ್ಲಿ ತಲೆಯೆತ್ತಿರುವ ವಾಣಿಜ್ಯೀಕರಣ ಮತ್ತು ಕೊಳ್ಳುಬಾಕತನದ ಅಲೆಗಳ ವಿರುದ್ಧ ಒಂದು ರಕ್ಷಾಕವಚವನ್ನು ನಿರ್ಮಿಸುತ್ತದೆ ಎಂದು ನಾನು ಪ್ರಾಮಾಣಿಕವಾಗಿ ಆಶಿಸುತ್ತೇನೆ.

ಸ್ವಾಮಿ ವಿವೇಕಾನಂದರ ಜೀವನ ಮತ್ತು ಸಂದೇಶಗಳನ್ನು ಪುನಃ ಸ್ಮರಿಸಿಕೊಳ್ಳುವುದರೊಂದಿಗೆ, ನನ್ನ ಮಾತುಗಳನ್ನು ಮುಗಿಸಲು ಇಚ್ಛಿಸುತ್ತೇನೆ. ಭಾರತವು ಬ್ರಿಟಿಷರ ವಸಾಹತು ಆಳ್ವಿಕೆಯಲ್ಲಿದ್ದಾಗ ಸ್ವಾಮೀಜಿ ಹುಟ್ಟಿದರಾದರೂ, ಅವರೆಂದೂ ಹತಾಶೆ ಮತ್ತು ಸಿನಿಕತನಕ್ಕೆ ಒಳಗಾಗಲಿಲ್ಲ. ಅವರು ವಾಸ್ತವತೆಯನ್ನು ಎದುರಿಸಿದರು ಹಾಗೂ ಅದನ್ನು ಬದಲಾಯಿಸಲು ದಣಿವಿಲ್ಲದೆ ಶ್ರಮಿಸಿದರು. ಅವರು ಹೀಗೆ ಹೇಳಿದ್ದಾರೆ:

**"ನೀವು ಯಶಸ್ವಿಯಾಗಬೇಕಾದರೆ ಅತ್ಯಂತ ಪ್ರಬಲ ಹಾಗೂ ಸತತ ಪ್ರಯತ್ನಶೀಲತೆ, ಹಾಗೆಯೇ ಅತ್ಯಂತ ಪ್ರಬಲ ಸಂಕಲ್ಪಶಕ್ತಿ ಹೊಂದಿರಬೇಕು. ಸತತ ಪ್ರಯತ್ನಶೀಲ ಆತ್ಮವು 'ನಾನು ಸಾಗರವನ್ನು ಕುಡಿಯುತ್ತೇನೆ, ನನ್ನ ಸಂಕಲ್ಪಕ್ಕೆ ಪರ್ವತಗಳು ಪುಡಿ ಯಾಗುತ್ತವೆ' ಎನ್ನುತ್ತದೆ. ಅಂತಹ ಚೈತನ್ಯ, ಅಂತಹ ಸಂಕಲ್ಪಶಕ್ತಿಯನ್ನು ಹೊಂದಿರಿ, ಕಷ್ಟಪಟ್ಟು ದುಡಿಯಿರಿ. ಆಗ ನೀವು ಗುರಿಯನ್ನು ತಲುಪಿಯೇ ತಲುಪುತ್ತೀರಿ."**

ಸ್ವಾಮಿ ವಿವೇಕಾನಂದರು ಭಾರತದ ಜನತೆಯಲ್ಲಿ ಅಪಾರ ನಂಬಿಕೆ ಹೊಂದಿದ್ದರು. ಆ ನಂಬಿಕೆಗೆ ಹಾಗೂ ಪ್ರತಿಯೊಬ್ಬ ಪ್ರಜೆಯೂ ತನ್ನ ಆತ್ಮಗೌರವ, ಘನತೆ ಮತ್ತು ಒಳಿತಿನ ಹಕ್ಕನ್ನು ಹೊಂದಿರುವಂಥ ಆತ್ಮವಿಶ್ವಾಸಭರಿತ ಭಾರತದ ನಿರ್ಮಾಣಕ್ಕೆ ವಿವೇಕಾನಂದರು ತೊಟ್ಟ ದೃಢಸಂಕಲ್ಪಕ್ಕೆ, ಇಂದು ನಮ್ಮನ್ನು ನಾವು ಪುನಃ ಅರ್ಪಿಸಿಕೊಳ್ಳಬೇಕಾದ ಅಗತ್ಯವಿದೆ. ಈ ಮಾತುಗಳೊಂದಿಗೆ ಈ ಶುಭಸಂದರ್ಭದಲ್ಲಿ, ಇಲ್ಲಿ ಉಪಸ್ಥಿತನಾಗಿರುವ ಬಗ್ಗೆ ನನ್ನ ಅಪಾರ ಸಂತೋಷವನ್ನು ಮತ್ತೊಮ್ಮೆ ವ್ಯಕ್ತಪಡಿಸುತ್ತೇನೆ. ✪

## ವಿವೇಕಾನಂದ ಘಟನಾವಳಿ

ಒಂದು ಸಲ ಸ್ವಾಮಿ ವಿವೇಕಾನಂದರು ಮಿಸ್ ಮುಲ್ಲರ್ ಮತ್ತು ಮತ್ತೊಬ್ಬ ಇಂಗ್ಲಿಷ್ ಸ್ನೇಹಿತನೊಡನೆ ಒಂದು ಹೊಲದಲ್ಲಿ ನಡೆದುಕೊಂಡು ಹೋಗುತ್ತಿದ್ದರು. ಈ ಸಮಯದಲ್ಲಿ ಗೂಳಿಯೊಂದು ಕೋಪದಿಂದ ಅವರ ಕಡೆ ಧಾವಿಸಿ ಬಂದಿತು. ಇಂಗ್ಲಿಷ್ ಸ್ನೇಹಿತನು ಓಡಿಹೋಗಿ ದಿಬ್ಬದ ಅತ್ತಕಡೆಯನ್ನು ಸುರಕ್ಷಿತವಾಗಿ ಸೇರಿದನು. ಮಿಸ್ ಮುಲ್ಲರ್ ತನ್ನ ಕೈಲಾದಮಟ್ಟಿಗೆ ಓಡಿ ಅನಂತರ ನೆಲದ ಮೇಲೆ ಬಿದ್ದಳು. ಇದನ್ನು ನೋಡಿದ ಸ್ವಾಮೀಜಿಗೆ ಆಕೆಗೆ ಬೇರೆ ಯಾವ ವಿಧದಲ್ಲೂ ಸಹಾಯ ಮಾಡಲು ಸಾಧ್ಯವಾಗಲಿಲ್ಲ. ಅವರು ಅವಳನ್ನು ತಮ್ಮ ಹಿಂದೆ ಇಟ್ಟುಕೊಂಡು, ಓಡಿಬರುತ್ತಿದ್ದ ಆ ಹೋರಿಯ ಕಡೆ ತಮ್ಮ ಕೈಗಳನ್ನು ಚಾಚಿ ಅಂತೂ ಜೀವ ಹೀಗೆ ಕೊನೆಗಾಣಬೇಕಾಗುತ್ತದೆ ಎಂದು ನಿರೀಕ್ಷಿಸುತ್ತ ನಿಂತುಕೊಂಡರು. ಅನಂತರ ಸ್ವಾಮೀಜಿ ಈ ಘಟನೆಯನ್ನು ವಿವರಿಸುತ್ತ, ಆ ಹೋರಿ ತಮ್ಮನ್ನು ಎಷ್ಟು ದೂರಕ್ಕೆ ಒಗೆಯಬಹುದು ಎಂಬುದನ್ನು ಲೆಕ್ಕಾಚಾರ ಮಾಡುತ್ತಿದ್ದೆ ಎಂದು ಹೇಳಿದರು. ಆದರೆ ಆ ಗೂಳಿ ಕೆಲವು ಗಜದವರೆಗೆ ಬಂದು ಅನಂತರ ಬೇರೆ ಕಡೆಗೆ ಓಡಿಹೋಯಿತು.

ಸ್ವಾಮಿ ವಿವೇಕಾನಂದರು ಇಂಗ್ಲೆಂಡ್ ದೇಶವನ್ನು ಬಿಡುವುದಕ್ಕೆ ಮುಂಚೆ, ಒಬ್ಬ ಇಂಗ್ಲಿಷ್ ಶಿಷ್ಯರು ಅವರನ್ನು ಕುರಿತು ಹೀಗೆ ಪ್ರಶ್ನಿಸುತ್ತಾರೆ: "ಸ್ವಾಮೀಜಿ, ನೀವು ನಾಲ್ಕು ವರ್ಷಗಳು ಭೋಗಭೂಮಿಯೆನಿಸಿದ ಬಲಾಢ್ಯವಾದ ಸಂಪತ್ತಿನಿಂದ ಬೀಗುತ್ತಿರುವ ಪಾಶ್ಚಾತ್ಯ ದೇಶದಲ್ಲಿ ವಾಸಮಾಡಿದ ಮೇಲೆ, ಈಗ ಭರತಖಂಡದ ಬಗ್ಗೆ ನಿಮಗೆ ಹೇಗೆ ಅನ್ನಿಸುತ್ತದೆ?" ಅದಕ್ಕೆ ಸ್ವಾಮೀಜಿ ಹೀಗೆ ಉತ್ತರಿಸಿದರು: "ನಾನು ಬರುವುದಕ್ಕೆ ಮುಂಚೆ ಭಾರತ ದೇಶವನ್ನು ಪ್ರೀತಿಸುತ್ತಿದ್ದೆ. ಈಗ ಭರತಖಂಡದ ಧೂಳು ಕೂಡ ನನಗೆ ಪವಿತ್ರವಾಗಿದೆ. ಅದರ ಮೇಲೆ ಬೀಸುವ ಗಾಳಿ ಪವಿತ್ರವಾಗಿದೆ. ಅದೀಗ ನನ್ನ ಪುಣ್ಯಭೂಮಿ, ತೀರ್ಥಕ್ಷೇತ್ರ."

ಸ್ವಾಮೀಜಿ ೧೯೦೨ರ ಜುಲೈ ೪ನೆಯ ತಾರೀಖು (ಅವರ ಮಹಾಸಮಾಧಿಯ ದಿನ) ಬೆಳಗ್ಗೆ ಗಾಢಧ್ಯಾನ ಮಾಡಿದರು. ಧ್ಯಾನವಾದ ಮೇಲೆ ಕಾಳಿಕಾಮಾತೆಯ ಮೇಲೆ ಅಪೂರ್ವಭಕ್ತಿಯಿಂದ ಒಂದು ಹಾಡನ್ನು ಹಾಡಿದರು. ದೇವಮಂದಿರದ ಮೆಟ್ಟಿಲುಗಳನ್ನು ಇಳಿಯುವಾಗ, ತಮಗೆ ತಾವೇ ಹೀಗೆ ಹೇಳಿಕೊಂಡರು: "ಮತ್ತೊಬ್ಬ ವಿವೇಕಾನಂದರ ಇದ್ದಿದ್ದರೆ ಈ ವಿವೇಕಾನಂದ ಏನು ಮಾಡಿದ ಎಂಬುದು ಗೊತ್ತಾಗುತ್ತಿತ್ತು, ಆದರೂ ಕಾಲಗರ್ಭದಲ್ಲಿ ಇಂತಹ ವಿವೇಕಾನಂದರು ಅದೆಷ್ಟು ಹುದುಗಿರುವರೋ!"

(ಆಧಾರ: **ಎಚ್ಚೆತ್ತ ಚೇತನ**)

# ಛಾಯಾಚಿತ್ರಗಳಲ್ಲಿ ಸ್ವಾಮಿ ವಿವೇಕಾನಂದ

ಕೆ.ಆರ್. ಮೋಹನ್



**ಛಾಯಾಚಿತ್ರ – ೧೯**

ಈ ಚಿತ್ರ ಸ್ವಾಮೀಜಿಯವರು ವಿಶ್ವಧರ್ಮ ಸಮ್ಮೇಳನದ ಒಂಭತ್ತನೇ ದಿನ ಅಂದರೆ, ೧೮೯೩ರ ಸೆಪ್ಟೆಂಬರ್ ೧೯ರಂದು, **'ಹಿಂದೂಧರ್ಮ'** ದ ಬಗ್ಗೆ ಪ್ರಬಂಧ ಮಂಡಿಸಿದಾಗ ತೆಗೆದದ್ದು ಎಂದು ಊಹಿಸಲಾಗಿದೆ. ಆದರೆ



ಚಿತ್ರ : ೧೯

ಇದಕ್ಕೆ ನಿಖರವಾದ ಆಧಾರವಿಲ್ಲ. ಜಾನ್ ಹೆನ್ರಿ ಬಾರೋಸ್ ಅವರು ೧೮೯೩ ರಲ್ಲಿ ಪ್ರಕಟಿಸಿದ The World's Parliament of Religions ಗ್ರಂಥದ ಎರಡನೇ ಸಂಪುಟದಲ್ಲಿ ಇದು ಮೊದಲ ಬಾರಿಗೆ ಪ್ರಕಟವಾಗಿತ್ತು.

ಈ ಚಿತ್ರದಲ್ಲಿ ಸ್ವಾಮೀಜಿ ಬಂದ್‌ಗಲಾ (ಕತ್ತುಮುಚ್ಚಿದ) ಕೋಟು ಮತ್ತು ಅಫಘಾನಿಸ್ತಾನಿ ಶೈಲಿಯ ಪೇಟಾ ಧರಿಸಿ ಮನಮೋಹಕವಾಗಿ ಕಾಣಿಸುತ್ತಾರೆ.

"ಜಗತ್ತಿಗೆ ಸಹಿಷ್ಣುತೆಯನ್ನೂ, ಸರ್ವಧರ್ಮ ಸ್ವೀಕಾರ ಭಾವವನ್ನೂ ಬೋಧಿಸಿದ ಧರ್ಮಕ್ಕೆ ಸೇರಿದವನು ನಾನೆಂಬ ಹೆಮ್ಮೆ ನನ್ನದು. ನಾವು ಸರ್ವಮತ ಸಹಿಷ್ಣುತೆಯನ್ನು ಒಪ್ಪುತ್ತೇವೆ, ಅಷ್ಟೇ ಅಲ್ಲದೆ ಸಕಲ ಧರ್ಮಗಳೂ ಸತ್ಯವೆಂದು ನಂಬುತ್ತೇವೆ" ಎಂದು ಸ್ವಾಮೀಜಿ ಸರ್ವಧರ್ಮ ಸಮ್ಮೇಳನದಲ್ಲಿ ಘೋಷಣೆ ಮಾಡಿದರು.

**ಛಾಯಾಚಿತ್ರ – ೨೦**

ಈ ಚಿತ್ರ ಶಿಕಾಗೊ ಭಂಗಿ (Chicago Pose) ಎಂದೇ ಪ್ರಖ್ಯಾತವಾಗಿದೆ. ಇದರ ಸುಮಾರು ಎಂಟು ಪ್ರತಿಗಳನ್ನು 'ಕ್ಯಾಬಿನೆಟ್ ಕಾರ್ಡ್' ಎಂಬ ವಿನೂತನ ಶೈಲಿಯಲ್ಲಿ ಥಾಮಸ್ ಹ್ಯಾರಿಸನ್ ಎಂಬ ಛಾಯಾಚಿತ್ರಗಾರನು ಸೆರೆಹಿಡಿದಿದ್ದನು.

ವಿವಿಧ ವಿನ್ಯಾಸಗಳು, ಸುಧಾರಿತ ಬೆಳಕಿನ ಸಂಯೋಜನೆ ಮತ್ತು ಪರಿಣಾಮಕಾರಿ ಹಿನ್ನೆಲೆ – ಇವು ಕ್ಯಾಬಿನೆಟ್ ಕಾರ್ಡ್‌ನ ವಿಶೇಷತೆ. ಈ ಶೈಲಿಯಲ್ಲಿ ವಿವಿಧ ಭಂಗಿಗಳಲ್ಲಿ ತೆಗೆದಿರುವ ಚಿತ್ರಗಳಿಗೆ ವಿಶೇಷ ಮೆರುಗು ಮತ್ತು ಸೊಬಗು ಇರುತ್ತವೆ. ಸ್ವಾಮೀಜಿಯವರ ಈ ಚಿತ್ರವನ್ನು ನೋಡಿದರೆ ಇದು ಗೊತ್ತಾಗುತ್ತದೆ.

ಸ್ವಾಮೀಜಿ ಈ ಚಿತ್ರದಲ್ಲಿ ಶೂರ, ಬಲಾಢ್ಯ ಹಾಗೂ ಪುರುಷಸಿಂಹರಂತೆ ಕಾಣುತ್ತಾರೆ.



ಚಿತ್ರ : ೨೦







**ಛಾಯಾಚಿತ್ರ – ೨೧**

ಈ ಚಿತ್ರದಲ್ಲಿ ಸ್ವಾಮೀಜಿಯವರ ಹಸ್ತಾಕ್ಷರ ಹಾಗೂ ಸಂದೇಶ ಬಂಗಾಳಿ ಮತ್ತು ಇಂಗ್ಲಿಷ್‌ಗಳಲ್ಲಿವೆ. **"ಭಾವಾತೀತ ಗುಣಾತೀತ ಸಚ್ಚಿದಾನಂದ ದಿವ್ಯಚೇತನಕ್ಕೆ ನನ್ನ ನಮಸ್ಕಾರ – ಸ್ವಾಮಿ ವಿವೇಕಾನಂದ"** ಎಂಬುದು ಈ ಬರಹದ ಸಾರಾಂಶ. ಸ್ವಾಮೀಜಿಯ ಗಾಂಭೀರ್ಯ ಮತ್ತು ಆತ್ಮವಿಶ್ವಾಸ ಈ ಚಿತ್ರದಲ್ಲಿ ಚೆನ್ನಾಗಿ ಮೂಡಿಬಂದಿದೆ.

**ಛಾಯಾಚಿತ್ರ – ೨೨**

ಸ್ವಾಮೀಜಿ ತಮ್ಮ ಮೊದಲನೆಯ ಭಾಷಣದ ನಂತರ ಒಂದೇ ದಿನದಲ್ಲಿ ಕೀರ್ತಿಶಿಖರವನ್ನೇರಿದರು. ಸಮ್ಮೇಳನಕ್ಕೆ ಬರುವ ಸಭಿಕರನ್ನು ಆಕರ್ಷಿಸಲು ಸ್ವಾಮೀಜಿಯವರ ವರ್ಣ ರಂಜಿತ ಚಿತ್ರವನ್ನು ಶಿಕಾಗೊ ನಗರದ ಎಲ್ಲ ಕಡೆ ಪ್ರದರ್ಶಿಸ ಲಾಗಿತ್ತು. ಹೋಲಿಸ್ಟರ್ ಸ್ಟರ್ಜಸ್ (Hollister Sturges) ಎಂಬ ಯುವಕ ಸ್ವಾಮೀಜಿಯ ಆಪ್ತರಾದ ಶ್ರೀಮತಿ ಬೆಟ್ಸಿ ಲೆಗೆಟ್‌ರ ಮಗ. ಅವನಿಗೆ ಸ್ವಾಮೀಜಿ ಮೂಲ ಭಿತ್ತಿಪತ್ರದ ಒಂದು ಪ್ರತಿಯನ್ನು ಕೊಡುಗೆಯಾಗಿ ನೀಡಿದ್ದರೆಂದು ಕಾಣುತ್ತದೆ. ಅದರಲ್ಲಿ ಈ ಒಕ್ಕಣೆಯನ್ನು ಕಾಣಬಹುದು: **"ಎಲ್ಲ ಬಗೆಯ ಸಾಮರ್ಥ್ಯ ಮತ್ತು ಯಶಸ್ಸು ನಿನ್ನದಾಗಲಿ ಎಂದು ಈ ನಿನ್ನ ಸ್ನೇಹಿತನ ಅವಿರತ ಪ್ರಾರ್ಥನೆ – ವಿವೇಕಾನಂದ."**

ಈ ಭಿತ್ತಿಚಿತ್ರದ ತಯಾರಕರು ಶಿಕಾಗೊವಿನ GOES LITHOGRAPHIC CO. ಎಂಬ ಸಂಸ್ಥೆಯವರು. ಇದರ ಒಂದು ಪ್ರತಿ ಸ್ವಾಮೀಜಿಯವರ ಶಿಷ್ಯೆಯಾದ ಶ್ರೀಮತಿ ಬ್ಲಾಡ್‌ಗೇಟ್ ಅವರ ಲಾಸ್ ಏಂಜಲಿಸ್ ನಗರದ ಮನೆ ಯಲ್ಲಿತ್ತು. ಅನಂತರ, ಸ್ವಾಮೀಜಿಯ ನಿಕಟ ಅನುಯಾಯಿ ಯಾಗಿದ್ದ ಮಿಸ್. ಜೊಸೆಫಿನ್ ಮ್ಯಾಕ್ಲೌಡ್, ಅದನ್ನು ರಿಡ್ಜ್‌ಲಿ ಮ್ಯಾನರ್‌ನ ಬಂಗಲೆಗೆ ತಂದು, ಕಟ್ಟುಹಾಕಿಸಿ, ಒಂದು ಗೋಥಿಕ್ ಶೈಲಿಯ ಕುರ್ಚಿಯ ಮೇಲೆ ಇರಿಸಿದ್ದರು. ಈ ಭಿತ್ತಿಚಿತ್ರದ ಒಂದು ಮೂಲಪ್ರತಿ ಅಮೆರಿಕದ ಬರ್ಕ್‌ಲಿ ಯಲ್ಲಿರುವ ವೇದಾಂತ ಸೊಸೈಟಿಯಲ್ಲಿದೆ.

**ಛಾಯಾಚಿತ್ರ – ೨೩**

ಇದು ಸ್ವಾಮೀಜಿಯವರು ಕುಳಿತ ಭಂಗಿಯಲ್ಲಿ ತೆಗೆದ ಚಿತ್ರ. ಇದರ ಬಲಭಾಗದ ಮೇಲುಗಡೆ, **"ಸಮತಾ ಸರ್ವ ಭೂತೇಷು ಏತನ್ಮುಕ್ತಸ್ಯ ಲಕ್ಷಣಂ"** ಎಂಬ ಸಂಸ್ಕೃತ ಶ್ಲೋಕ ವನ್ನು ಬಂಗಾಲಿ ಲಿಪಿಯಲ್ಲಿ ಸ್ವಾಮೀಜಿ ಬರೆದಿದ್ದಾರೆ. "ಎಲ್ಲ ಜೀವಿಗಳನ್ನೂ ಸಮಭಾವದಿಂದ ನೋಡುವುದೇ ಮುಕ್ತನ ಲಕ್ಷಣ" ಎಂಬ ಒಕ್ಕಣೆಯ ಅರ್ಥವನ್ನು ಕೆಳಗಡೆ ಇಂಗ್ಲಿಷ್‌ನಲ್ಲಿ ಬರೆದಿದ್ದಾರೆ. ಹಾಗೆಯೇ ಕೆಳಭಾಗದಲ್ಲಿ, 'ವಿವೇಕಾನಂದ' ಎಂದು ಹಸ್ತಾಕ್ಷರವನ್ನು ಇಂಗ್ಲಿಷ್‌ನಲ್ಲಿ ಹಾಕಿದ್ದಾರೆ.

ಸ್ವಾಮೀಜಿ ಸೆಪ್ಟೆಂಬರ್ ೧೯ರ ಸಂಜೆ ಕಿಕ್ಕಿರಿದ ಸಭೆ ಯನ್ನು ಉದ್ದೇಶಿಸಿ ಭಾಷಣ ಮಾಡಿದ್ದು ಹೀಗೆ: " 'ಅಮೃತ ಪುತ್ರರು' – ಎಂತಹ ಅದ್ಭುತವಾದ ಹೆಸರು! ಎಂತಹ ಆಶಾ ದಾಯಕ ಹೆಸರು! ಸೋದರರೇ, ಈ ಮಧುರನಾಮದಿಂದ